O.S.144/2019 PW-3

ದಿನಾಂಕಃ 17.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ದಾವಾ ಸ್ವತ್ತು ಮೂಲತಃ ಮಹಲಿಂಗಪ್ಪ ರವರ ದೊಡ್ಡಪ್ಪನವರಾದ ಚಿಕ್ಕಣ್ಣ ರವರಿಗೆ ಸೇರಿರುತ್ತದೆ. ಪುಟ್ಟಲಿಂಗಮ್ಮ ರವರ ತಂದೆ, ಗಂಡ ಹಾಗೂ ಮಕ್ಕಳ ಹೆಸರು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ಪುಟ್ಟಲಿಂಗಮ್ಮರವರಿಗೆ ಸೇರಿರುತ್ತದೆ ಎಂದರೆ ಸಾಕ್ಷಿಯು ಸೇರಿರಬಹುದು ಎಂದು ನುಡಿದಿರುತ್ತಾರೆ. ಪುಟ್ಟಲಿಂಗಮ್ಮರವರು ಮೃತಪಟ್ಟಿರುತ್ತಾರೆ. ದಾವಾ ಸ್ವತ್ತನ್ನು ಪುಟ್ಟಲಿಂಗಮ್ಮನವರು ಕೆ ಕಂಬಯ್ಯ ರವರಿಗೆ ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟರು ಹಾಗೂ ಸ್ವಾಧೀನವನ್ನು ಬಿಟ್ಟುಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಅವರು ಕ್ರಯ ಪತ್ರವನ್ನು ಬೆರದುಕೊಡದಿದ್ದ ಕಾರಣ ಕಂಬಯ್ಯ ರವರು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಬೇರೆಯವರಿಗೆ ಮಾರಬಾರದು ಎಂದು ಆದೇಶ ಇತ್ತು ಎಂದು ನನಗೆ ಗೊತ್ತಿಲ್ಲ. ಮಹಲಿಂಗಪ್ಪರವರು ನಮ್ಮ ಗ್ರಾಮಸ್ತರು. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಸ್ವತ್ತನ್ನು ವಾದಿಯು ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದಾರೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ ಎಂದರೆ ಸರಿ. ನಾನು ಸದರಿ ಕ್ರಯ ಪತ್ರವನ್ನು ನೋಡಿರುವುದಿಲ್ಲ. ವಾದಿಯು ಕ್ರಯದ ಮೂಲಕ ದಾವಾ ಸ್ವತ್ತನು ಖರೀದಿ ಮಾಡಿರುವ ವಿಚಾರ ನನಗೆ ಯಾರೂ ಹೇಳಿರುವುದಿಲ್ಲ. ನನ್ನ ಜಮೀನಿನ ಸರ್ವೆ ನಂ.148. ದಾವಾ ಸ್ವತ್ತಿಗೆ ನನ್ನ ಜಮೀನು 300 ಅಡಿ ದೂರದಲ್ಲಿ ಇರುತ್ತದೆ. ದಾವಾ ಸ್ವತ್ತಿನ ಚೆಕ್ಕು ಬಂಧಿ ಪೂರ್ವಕ್ಕೆ- ಹಳ್ಳ, ಪಶ್ಚಿಮಕ್ಕೆ-ಓಂಕಾರಪ್ಪ ರವರ ಜಮೀನು, ಉತ್ತರಕ್ಕೆ-ತಿಮ್ಮರಾಯಪ್ಪ ರವರ ಜಮೀನು, ದಕ್ಷಿಣಕ್ಕೆ-ಓಂಕಾರಪ್ಪ ರವರ ಜಮೀನು ಇರುತ್ತದೆ. ನಾನು ಮತ್ತು ಮಹಲಿಂಗಪ್ಪರವರಿಗೆ ಅನ್ಯೂನ್ಯವಾಗಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗ ಪರಿಚಯ ನನಗೆ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಅವರು ದಾವಾ ಸ್ವತ್ತಿನ ಬಳಿ ಬರುತ್ತಿರುತ್ತಾರೆ ಎಂದು ನುಡಿದಿರುತ್ತಾರೆ. ಕೆ ಕಂಬಯ್ಯ ರವರು ದಾವಾ ಸ್ವತ್ತನ್ನು ಖರೀದಿ ಮಾಡಿದಾಗಿನಿಂದಲೂ ಸ್ವಾಧೀನದಲ್ಲಿ ಇದ್ದು ಬೆಳೆಯನ್ನು ಬೆಳೆಯುತಿದ್ದಾರೆ ಎಂದರೆ ಸರಿಯಲ್ಲ. ಮಹಲಿಂಗಪ್ಪರವರಿಗೆ ದಾವಾ ಸ್ವತ್ತು ಹೇಗೆ ಬಂತು ಎಂದರೆ ನನಗೆ ಗೊತ್ತಿಲ್ಲ. ಅವರು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದು ಮಹಲಿಂಗಪ್ಪರವರು ಸುಮಾರು 20 ವರ್ಷಗಳ ಹಿಂದೆ ನನಗೆ ಹೇಳಿರುತ್ತಾರೆ. ದಾವಾ ಸ್ವತ್ತಿನ ಬಳಿ ನನ್ನ ಜಮೀನು ಇಲ್ಲ ಎಂದರೆ ಸರಿಯಲ್ಲ. ಮಹಲಿಂಗಪ್ಪರವರು ದಾವಾ ಸ್ವತ್ತಿನ ಮೇಲೆ 3 ದಾವೆಗಳನ್ನು ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಗಳು ವಜಾ ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಮಹಲಿಂಗಪ್ಪರವರು

ಎಂದಿಗೂ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಕಂಬಯ್ಯ ರವರು ಮೃತಪಟ್ಟ ನಂತರ ಅವರ ಹೆಂಡತಿ ಮತ್ತು ಮಕ್ಕಳು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದು, ಬೆಳೆಗಳನ್ನು ಬೆಳೆದಿದ್ದಾರೆ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.